ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೮೦೧ (೨೧೪೪)

ಸದಸ್ಯರ ಹೆಸರು ಶ್ರೀ ವಿಶ್ವನಾಥ ಹೆಚ್ ಎಂ (ಸಕಲೇಶಪುರ)

ಉತ್ತರಿಸುವ ಸಚಿವರು ಶ್ರೀ ಬಿ ನಾಗರಾಜ ಶೆಟ್ಟಿ (ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	೨೦೦೬-೦೭ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳ ಮೀನುಗಾರರಿಗೆ ವಸತಿ ನಿರ್ಮಾಣಕ್ಕಾಗಿ ಮಂಜೂರಾತಿ ನೀಡಲಾದ ಮನೆಗಳೆಷ್ಟು?	ಸಕಲೇಶಪುರ ವಿಧಾನ ಸಭಾ ಕ್ಷೇತ್ರಕ್ಕೆ ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳ ಸೇರ್ಪಡೆಯಾಗಿದ್ದು, ಈ ವಿಧಾನ ಸಭಾ ಕ್ಷೇತ್ರಕ್ಕೆ ೨೦೦೬-೦೭ನೇ ಸಾಲಿನಲ್ಲಿ ನಿರ್ವಸತಿ ಮೀನುಗಾರರಿಗೆ ೧೦ ಮನೆಗಳನ್ನು ಮಂಜೂರು ಮಾಡಲಗಿದೆ
ಆ)	ಹಾಗಿದ್ದಲ್ಲಿ, ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ?	ಹೌದು
ಇ)	ಹಾಗಿದಲ್ಲಿ, ಫಲಾನುಭವಿಗಳನ್ನು ಆಯ್ಕೆಗೊಳಿಸಲು ಅನುಸರಿಸಲಾದ ಮಾನದಂಡವೇನು (ವಿವರ ನೀಡುವುದು) ?	ಫಲಾನುಭವಿಗಳು ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರಬೇಕು, ಸ್ವಂತ ನಿವೇಶನ ಹೊಂದಿರಬೇಕು, ಸರ್ಕಾರದ ಇತರೆ ವಸತಿ ಯೋಜನೆಗಳಲ್ಲಿ ಸ್ಥಳೀಯ ಮೀನುಗಾರಿಕೆ ಅಧಿಕಾರಿಗಳು ಗುರ್ತಿಸಿ ಸ್ಥಳೀಯ ಶಾಸಕರೊಂದಿಗೆ ಸಮಾಲೋಚಿಸಿ ಆಯ್ಕೆಯನ್ನು ಅಂತಿಮಗೊಳಿಸಲಾಗುವುದು